ಪುರಸಭೆ ಹಾಗೂ ನಗರಸಭೆಗಳಿಗೆ ಟ್ರಾಕ್ಟರ್‌ಗಳನ್ನು ಒದಗಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 81(16)

ಸದಸ್ಯರ ಹೆಸರು: ಶ್ರೀ ಕೃಷ್ಣಪ್ಪ ಎ.(ದೊಡ್ಡಬಳ್ಳಾಪುರ)

ಉತ್ತರಿಸುವ ಸಚಿವರು: ಶ್ರೀ ಎಂ.ಮಲ್ಲಿಕಾರ್ಜುನ ನಾಗಪ್ಪ(ಪೌರಾಡಳಿತ ರಾಜ್ಯ ಸಚಿವರು)

ಪ್ರಶ್ನೆ

ಅ) ರಾಜ್ಯದಲ್ಲಿನ ಎಷ್ಟು ಪುರಸಭೆ ಹಾಗೂ ನಗರಸಭೆಗಳಿಗೆ ಟ್ರಾಕ್ಟರ್‌ಗಳನ್ನು ಒದಗಿಸಲಾಗಿದೆ?

ಆ) ಒದಗಿಸಿರುವ ಟ್ರಾಕ್ಟರ್‌ಗಳಿಗೆ ಎಲ್ಲೆಲ್ಲಿ ಡ್ರೈವರ್ ಮತ್ತು ಲೋಡರ್‌ಗಳನ್ನು ನಿಯುಕ್ತಿ ಮಾಡಲಾಗಿದೆ, ಎಲ್ಲೆಲ್ಲಿ ಎಷ್ಟು ಈ ಖಾಲಿ ಹುದ್ದೆಗಳಿವೆ?

ಇ) ಈ ಖಾಲಿ ಹುದ್ದೆಗಳನ್ನು ಒದಗಿಸದಿರಲು ಕಾರಣವೇನು? ಮತ್ತು ಖಾಲಿಯಿರುವ ಹುದ್ದೆಗಳನ್ನು ಎಂದು ತುಂಬಲಾಗುವುದು?

ಉತ್ತರ

ಅ) 69.

ಆ) ಡ್ರೈವರ್ ಹುದ್ದೆಗಳು ಖಾಲಿಯಿರುವುದಿಲ್ಲ. ವಾಹನ ಚಾಲನೆ ತಿಳಿದಿರುವ ಗ್ರೂಪ್ 'ಡಿ' ನೌಕರರನ್ನು ಟ್ರಾಕ್ಟರ್ ಚಾಲನೆಗೆ ಉಪಯೋಗಿಸಿಕೊಳ್ಳಲಾಗುವುದು. ಉಳಿದಂತೆ ಕೆಲವು ಚಾಲಕರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿದೆ.

ಇ) ಆರ್ಥಿಕ ಮಿತವ್ಯಯ ಆದೇಶದ ಮೇರೆಗೆ ಹುದ್ದೆಗಳನ್ನು ತುಂಬಲು ಸಾಧ್ಯವಿರುವುದಿಲ್ಲ.

ಬೆಂಗಳೂರು ನಗರದಲ್ಲಿ ಹಳೆಯ ನೀರಿನ ಪೈಪ್‌ಗಳನ್ನು ಬದಲಾಯಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 83(168)

ಸದಸ್ಯರ ಹೆಸರು: ಶ್ರೀ ರಾಮಲಿಂಗಾ ರೆಡ್ಡಿ(ಜಯನಗರ)